# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಗಕೇಶಾ/KAAMS/08/2026

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಡಾ:ಬಿ. ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560 001, ದಿ:11.09.2026

## <u>ಸುತ್ತೋಲೆ</u>

ವಿಷಯ: ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರರುಗಳು ಹಾಜರಾತಿಯನ್ನು **KARTAVYA(KAAMS)** ಅಪ್ಲಿಕೇಶನ್ ಮೂಲಕ ಕಡ್ಡಾಯವಾಗಿ ದಾಖಲಿಸುವ ಕುರಿತು.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ: ಕವಿಪ/ಗಕೇಶಾ/KAAMS/08/2026. ದಿ:17.06.2026
2. ಕಡತ ಸಂಖ್ಯೆ: ಕವಿಪ/ಗಕೇಂಶಾ/KAAMS/08/2026

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲೇಖಿತ ಸುತ್ತೋಲೆಯ ಮೂಲಕ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳು(ಶಾಸಕರ ಭವನವೂ ಸೇರಿದಂತೆ) ತಮ್ಮ ಮೊಬೈಲ್ ಸಾಧನಗಳಲ್ಲಿ **KAAMS ಅಪ್ಲಿಕೇಶನ್** ಅನ್ನು ತಕ್ಷಣವೇ ಇನ್‌ಸ್ಟಾಲ್ ಮಾಡಿ, ಅಗತ್ಯ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, **ತಮ್ಮ ಹಾಜರಾತಿಯನ್ನು KARTAVYA(KAAMS) ಅಪ್ಲಿಕೇಶನ್ ಮೂಲಕ ದಾಖಲಿಸುವಂತೆ** ತಿಳಿಸಲಾಗಿರುತ್ತದೆ. ಆದಾಗ್ಯೂ, ಹಲವಾರು ಅಧಿಕಾರಿ/ನೌಕರರುಗಳು **ತಮ್ಮ ಹಾಜರಾತಿಯನ್ನು** KARTAVYA(KAAMS) **ಅಪ್ಲಿಕೇಶನ್ ಮೂಲಕ ದಾಖಲಿಸುತ್ತಿಲ್ಲದಿರುವುದು** ಕಂಡುಬಂದಿರುತ್ತದೆ.

ಆದುದರಿಂದ, ಇದುವರೆವಿಗೂ ತಮ್ಮ ಹಾಜರಾತಿಯನ್ನು KARTAVYA(KAAMS) ಅಪ್ಲಿಕೇಶನ್ ಮೂಲಕ ದಾಖಲಿಸದ ಅಧಿಕಾರಿ/ನೌಕರರುಗಳು ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮ ಹಾಜರಾತಿಯನ್ನು KARTAVYA(KAAMS) ಅಪ್ಲಿಕೇಶನ್ ಮೂಲಕ **ಕಡ್ಡಾಯವಾಗಿ** ದಾಖಲಿಸಬೇಕೆಂದು ತಿಳಿಸಲಾಗಿದೆ. ಇಲ್ಲವಾದಲ್ಲಿ ಅಂತಹ ಅಧಿಕಾರಿ/ನೌಕರರುಗಳು ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮಕ್ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

(ಕುಷ್ಟರ್ ಉನ್ನೀಸ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ,

ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿ/ನೌಕರರುಗಳಿಗೆ (ಶಾಸಕರ ಭವನವೂ ಸೇರಿದಂತೆ)

<u>ಪ್ರತಿಗಳು:</u>

1. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ
2. ಮಾನ್ಯ ಪೀಠಾಸೀನಾಧಿಕಾರಿಗಳು/ಸಂಸದೀಯ ಪದಾಧಿಕಾರಿಗಳ ಆಪ್ತ ಕಾರ್ಯದರ್ಶಿಯರಿಗೆ, ಕವಿಪ.
3. ಕಾರ್ಯದರ್ಶಿ(ಪ್ರ)ರವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
4. ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರುಗಳಿಗೆ, ಕವಿಪ.
5. ಸೀನಿಯರ್ ಪ್ರೋಗ್ರಾಮರ್, ಗಣಕ ಕೇಂದ್ರ, ಕವಿಪ.
6. ರಕ್ಷಾ ಕಡತಕ್ಕೆ/ಸೂಚನಾ ಫಲಕಕ್ಕೆ/ಬಿಡಿ ಪ್ರತಿಗಳು.